

ಜೋಯಿಡಾ ತಾಲ್ಲೂಕಿನ ಮಾಟಗಾಂವ್ ಎಂಬ ಹಳ್ಳಿಯಲ್ಲಿ ಒಂದು ಪುಟ್ಟ ಶಾಲೆಯಿದೆ. ಅದು ಏಕೋಪಾಧ್ಯಾಯ ಶಾಲೆಯಾದ್ದರಿಂದ ಪುಟ್ಟ ಶಾಲೆ ಎನ್ನುವುದೇ ಸರಿ. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇದುವರೆಗೆ ಇದ್ದ ಟೀಚರ್ ಒಬ್ಬರಿಗೆ ವರ್ಗಾವಣೆಯಾದ್ದರಿಂದ ಅಲ್ಲಿಗೆ ಹೊಸದಾಗಿ ಅತಿಥಿ ಶಿಕ್ಷಕರೊಬ್ಬರನ್ನು ನೇಮಕ ಮಾಡಲಾಗಿದೆ. ಅವರಿಗೆ, ಶಾಲೆಯ ಹಿನ್ನೆಲೆಯು ಇನ್ನಷ್ಟೇ ಗೊತ್ತಾಗಬೇಕಿದೆ. ಆದರೆ ಹೊಸ ಟೀಚರ್ ಬರುವಲ್ಲಿಯವರೆಗೆ ಮತ್ತು ಅವರಿಗೆ ಶಾಲೆಯ ಹಿನ್ನೆಲೆ ಮುನ್ನೆಲೆಗಳು ಅರ್ಥವಾಗುವವರೆಗೆ ಶಾಲೆಯ ಉಸ್ತುವಾರಿ ನೋಡಿಕೊಂಡಿರುವುದು ಶಾಲೆಯ ಬಿಸಿಯೂಟದ ಅಡುಗೆಯವರಾದ ಸೀಮಾಬಾಯಿ. ಆ ಊರಿನ ಯಾವ ಮನೆಯಿಂದ ಮಕ್ಕಳು ಶಾಲೆಗೆ ಬರುತ್ತಾರೆ, ಅವರ ಹಿನ್ನೆಲೆಯೇನು, ಹುಡುಗಿಯರೆಷ್ಟು ಮಂದಿ, ಹುಡುಗರೆಷ್ಟು ಮಂದಿ, ಅವರ ಮನೆಯ ಸ್ಥಿತಿಗತಿಯೇನು ಎಂಬೆಲ್ಲ ಮಾಹಿತಿಯೂ ಆಕೆಗೆ ತಿಳಿದಿದೆ. ಅಷ್ಟೇ ಏಕೆ, ಆ ಊರಿನವರೇ ಆದ ಸೀಮಾಬಾಯಿ ತಮ್ಮೊಡನೆಯೇ ಎಲ್ಲ ಮಕ್ಕಳನ್ನು ಕೂಡಿಸಿಕೊಂಡು ಶಾಲೆಗೆ ಬರುತ್ತಾರೆ. ಹಿರಿಯ ಪ್ರಾಥಮಿಕ ಶಾಲೆಯಲ್ಲಿ 'ದೊಡ್ಡವರಾದ' ಹೆಣ್ಣುಮಕ್ಕಳ ಅಮ್ಮಂದಿರು, ಬಾಯೋರನ್ನು ಕರೆದು ಕಿವಿಯಲ್ಲಿಯೇ, 'ತುಸು ಜೋಪಾನ ನೋಡ್ಕೊಳಿ ಮಗಳನ್ನು...' ಎಂದು ಕಿವಿಮಾತು ಹೇಳುತ್ತಾರೆ. 'ಎಲ್ಲ ಅರ್ಥವಾಯಿತು' ಎನ್ನುವಂತೆ ಸೀಮಾಬಾಯಿ ಶಾಲೆಗೆ ತೆರಳುತ್ತಾರೆ. ಸ್ಯಾನಿಟರಿ ಪ್ಯಾಡಿನ ಅವಶ್ಯಕತೆ ಇರುವ ಮಕ್ಕಳಿಗೆ ಒದಗಿಸಿಕೊಡುವುದು, ತಲೆಸುತ್ತು ಅಥವಾ ಹೊಟ್ಟೆ ನೋವು ಎಂದು ಅಸ್ವಸ್ಥರಾದಂತೆ ತೋರುವ ಮಕ್ಕಳಿಗೆ ತುಸು ವಿಶ್ರಾಂತಿಯ ಅಗತ್ಯವಿದೆ ಎಂದು ಟೀಚರ್‌ಗೆ ಕಿವಿಮಾತು ಹೇಳುವುದು, ಊಟ ತಿಂಡಿಯ ನಿಗಾ ವಹಿಸುವುದು – ಹೀಗೆ ಸೀಮಾಬಾಯಿ ಆ ಶಾಲೆಯ ಮಕ್ಕಳ ಅಮ್ಮನಂತೆ ಪೊರೆಯುತ್ತಾರೆ.

ಶಾಲೆಗಳಲ್ಲಿ ಪಾಠ ಪ್ರವಚನ, ಪರೀಕ್ಷೆ ಫಲಿತಾಂಶ ಮುಂತಾದ ಶೈಕ್ಷಣಿಕ ವಿಚಾರಗಳ ಹೊರತಾಗಿ ಮಕ್ಕಳ ಜೀವನಕ್ಕೆ ಸಂಬಂಧಿಸಿದ ಅದೆಷ್ಟೋ ವಿಚಾರಗಳಿರುತ್ತವೆ. ಮಕ್ಕಳ ಜೀವನಕ್ಕೆ ಮಾರ್ಗದರ್ಶಕರಾಗುವ, ಅವರ ಜೀವನಕ್ಕೆ ಒಂದು ದಿಕ್ಕುಗಾಣಿಸುವ ಮಾತುಗಳನ್ನು ಹೇಳುವ ಗುರುಗಳೊಬ್ಬರು ಅಲ್ಲಿ ಸಿಗುತ್ತಾರೆ. ಅದರಲ್ಲಿಯೂ ಹಿರಿಯ ಪ್ರಾಥಮಿಕ ತರಗತಿಗಳನ್ನು ಪ್ರವೇಶಿಸುವ ವೇಳೆಗೆ ಮಾನಸಿಕವಾಗಿ ಬಹಳ ಗೊಂದಲದಲ್ಲಿರುವ ಹೆಣ್ಣುಮಕ್ಕಳಿಗೆ ಒಂದಿಷ್ಟು ನೆಮ್ಮದಿಯ ಆಸರೆಯು ಶಾಲೆಯಲ್ಲಿಯೇ ದೊರೆಯುತ್ತದೆ. ವಿದ್ಯಾರ್ಥಿನಿಯರಿಗೆ ಋತುಚಕ್ರವು ಆರಂಭವಾಗುವ ವೇಳೆಗೆ ಮಕ್ಕಳಿಗೆ ಈ ಕುರಿತು ಅರಿವು ಮೂಡಿಸುವ ಕೆಲಸವನ್ನು ಶಾಲೆಯಲ್ಲಿ ಮಾಡುತ್ತಾರೆ. ಆದ್ದರಿಂದ ಮನೆಯಲ್ಲಿ ಬಿಗುವಿನ ವಾತಾವರಣವಿದ್ದರೆ ಮಕ್ಕಳಿಗೆ ತಮ್ಮ ಅಂತರಂಗದ ಬೇನೆ ಬೇಸರಗಳನ್ನು ಹೇಳಿಕೊಳ್ಳಲು ಶಾಲೆಯೇ ಉತ್ತಮ ಪರಿಸರವನ್ನು ಕಲ್ಪಿಸುತ್ತದೆ.

ಆದರೆ ಎಲ್ಲ ಶಾಲೆಗಳಲ್ಲಿಯೂ ಈ ರೀತಿಯ ಉತ್ತಮ ಪರಿಸರವಿದೆಯೇ? ಅಂತಹ ಪರಿಸ್ಥಿತಿಯನ್ನು ಸೃಷ್ಟಿಸುವ ಹೊಣೆಯನ್ನು ಶಾಲೆಯ ಆಡಳಿತ ಮಂಡಳಿ ವಹಿಸುತ್ತದೆಯೇ?

ಮೇಲಿನ ಪ್ರಶ್ನೆಗಳಿಗೆ ದೊರೆಯುವ ಉತ್ತರ – ಇಲ್ಲ.

ಶಾಲೆಯೆಂದರೆ ಎರಡನೆಯ ಮನೆಯಿದ್ದಂತೆ

ಬಾಲ್ಯವಿವಾಹ ತಡೆ ಹಾಗೂ ಸ್ವಚ್ಛ ಭಾರತ ಕುರಿತು ಅರಿವು ಮೂಡಿಸಲು ಕೊಪ್ಪಳದಲ್ಲಿ ಶಾಲಾ ಮಕ್ಕಳಿಂದ ಜಾಥಾ (ಸಂಗ್ರಹ ಚಿತ್ರ)





ಮುಟ್ಟು ಎನ್ನುವುದು ಹೆಣ್ಣುಮಕ್ಕಳ ಪಾಲಿಗೆ ಒಂದು ಸವಾಲು ಆಗಿದೆ. ಯಾಕೆಂದರೆ ಮೊದಲನೇ ಸಲ ಮುಟ್ಟಾದಾಗ ವಿವಿಧ ಆಚರಣೆಗಳ ಸಲುವಾಗಿ ಅನೇಕ ದಿನ ವಿದ್ಯಾರ್ಥಿನಿಯರು ಶಾಲೆಗೆ ಬರುವುದಿಲ್ಲ. ಕೆಲವೊಬ್ಬರಂತೂ ನಾಲ್ಕೈದು ತಿಂಗಳು ರಜೆ ಹಾಕುವುದೂ ಇದೆ. ಇನ್ನು ಋತುಮತಿಯರಾದ ಮೇಲೆ ಯಾವುದೇ ವಿದ್ಯಾರ್ಥಿನಿಗೆ ಅಸೌಖ್ಯ ಕಾಣಿಸಿಕೊಂಡಾಗ ಅವರಿಗೆ ಗಾಳಿಯಾಗಿದೆ ಎಂಬ ಕಾರಣಕೊಟ್ಟು, ಹಲವು ದಿನಗಳ ಕಾಲ ರಜೆ ಹಾಕಿಸುತ್ತಾರೆ. ಇದರಲ್ಲಿ ಮಕ್ಕಳ ತಪ್ಪೇನೂ ಇಲ್ಲ. ಹೀಗೆ ದೀರ್ಘ ರಜೆ ಹಾಕುವುದರಿಂದ ಅವರ ಶಿಕ್ಷಣ ಹಾಳಾಗುತ್ತದೆ. ಈ ಬಗೆಗೆ ಪೋಷಕರಲ್ಲಿ ಅರಿವು ಮೂಡಿಸಬೇಕಾಗಿದೆ. ಅಂತಹ ಕೆಲಸವನ್ನು ಶಿಕ್ಷಕರು ಮುತುವರ್ಜಿಯಿಂದ ಮಾಡಬೇಕಾಗುತ್ತದೆ. ಮುಟ್ಟು ಎನ್ನುವುದು ಮೈಲಿಗೆ ಅಲ್ಲ ಎಂದು ನಾವು ಯಾರೋ ಒಬ್ಬರಿಬ್ಬರು ಹೇಳಿದಾಗ ಸಮುದಾಯದ ಜನರು ನಮ್ಮನ್ನು ವಿಚಿತ್ರವಾಗಿ ನೋಡುತ್ತಾರೆ. ಇದು ಎಲ್ಲರೂ ಒಗ್ಗಟ್ಟಾಗಿ ಮಾಡಬೇಕಾದ ಪ್ರಯತ್ನ. ಮನೆಯಲ್ಲಿ ಮೂಢ ಆಚರಣೆಗಳನ್ನು ನಿಲ್ಲಿಸಿದರೆ ಮಕ್ಕಳು ಶಾಲೆಗೆ ಬರುವುದು ಸಾಧ್ಯವಾಗುತ್ತದೆ.

**-ದಾಕ್ಷಾಯಿಣಿ ಹುಡೇದ**

ಸರಕಾರಿ ಕನ್ನಡ ಗಂಡುಮಕ್ಕಳ ಶಾಲೆ, ಕಾಲೇಬಾಗ್, ವಿಜಯಪುರ